ವಿತ್ತ ಸಂಚಿಕೆ
APRIL 2024

# INSPIRE INDIA



ಶರಣ್ ಪಾಟೀಲ್
ಆರ್ಥಿಕ ತಜ್ಞರು


## ಸಲಹೆ ನಮ್ಮದು ಹೂಡಿಕೆ ನಿಮ್ಮದು

INSPIRE INDIA WEALTH PRIVATE LTD. @ 65, 'Surasa Enclave' 1st floor, Puttanna Road, Gandhi Bazar
Basvanagudi, Bengaluru 560004, Ph: +91 8042129917, 9035414414. Mail: info@inspireindiafs.com Website: www.inspireindiafs.com




ನೀವು ಸರಿಯಾದ ಟ್ರಾಕ್‌ನಲ್ಲಿ ಇದ್ದೀರಿ ಅಂದುಕೊಳ್ಳಿ, ಹಾಗಂತ ಅಲ್ಲೇ ಕುಂತರೆ ರೈಲು ನಿಮ್ಮ ಮೇಲೆ ಹರಿದು ಹೋಗುತ್ತದೆ.

---ವಿಲ್ ರೋಜರ್ಸ್



ತಪ್ಪು ಮಾಡಿದ್ದರೆ, ಸೋಲು ಅನುಭವಿಸಿದ್ದರೆ ಮರೆತು ಬಿಡು. ಸದ್ಯಕ್ಕೆ ಏನು ಬೇಕೋ ಅದನ್ನು ಮಾತ್ರ ಮಾಡು.

--ವಿಲಿಯಂ ಡುರಾಂಟ್



ಯಶಸ್ವೀ ಮನುಷ್ಯರೂ ತಪ್ಪುಗಳನ್ನು ಮಾಡುತ್ತಾರೆ. ಆದರೆ, ಅವರು ಎಂದೂ ಪ್ರಯತ್ನ ಮಾಡುವುದನ್ನು ಬಿಡುವುದಿಲ್ಲ.

--ಕಾನ್ರಾಡ್ ಹಿಲ್ಟನ್

# ಭಾರತಕ್ಕಿದು ಅಮೃತ ಕಾಲ



**2047ರ ಹೊತ್ತಿಗೆ ಭಾರತ ಸ್ವಾತಂತ್ರ್ಯ ಗಳಿಸಿ 100 ವರ್ಷ ತುಂಬಲಿದೆ. ಇಲ್ಲಿಂದ 2047ರ ವರೆಗಿನ ಅವಧಿಯನ್ನು ಅಮೃತ ಕಾಲ ಎಂದು ಕರೆಯಲಾಗಿದೆ. ಧನಾತ್ಮಕ ಚಿಂತನೆ, ಆರೋಗ್ಯಪೂರ್ಣ ಪ್ರಗತಿ ಮತ್ತು ಅತ್ಯಧಿಕ ಶಕ್ತಿಯೊಂದಿಗೆ ಈ ಅವಧಿಯನ್ನು ಅತ್ಯಂತ ಪವಿತ್ರ ಎಂದು ಘೋಷಿಸಲಾಗಿದೆ.**

**"ಕ್ಷಿಪ್ರಗತಿಯಲ್ಲಿ ಬದಲಾಗುತ್ತಿರುವ ಜಗತ್ತಿನಲ್ಲಿ ಭಾರತವು 'ವಿಶ್ವಮಿತ್ರ'ನಾಗಿ ಮುಂಚೂಣಿಯಲ್ಲಿದೆ. ಸಮಾನ ಗುರಿಗಳ ಮೇಲೆ ನಾವು ನಿರ್ಧಾರ ಕೈಗೊಂಡು ಅವುಗಳನ್ನು ಸಾಧಿಸಲೂಬಹುದು ಎಂಬ ವಿಚಾರದಲ್ಲಿ ಭಾರತವು ಇಡೀ ವಿಶ್ವಕ್ಕೆ ಭರವಸೆಯನ್ನು ಮೂಡಿಸಿದೆ"**

–ಪ್ರಧಾನಿ ಶ್ರೀ ನರೇಂದ್ರ ಮೋದಿ

3.73 ಟ್ರಿಲಿಯನ್ ಡಾಲರ್ ಜಿಡಿಪಿಯೊಂದಿಗೆ ಭಾರತವು ಜಗತ್ತಿನ ಐದನೇ ಬೃಹತ್ ಅರ್ಥ ವ್ಯವಸ್ಥೆಯಾಗಿ ಹೊರಹೊಮ್ಮಿರುವುದು ವಿಶ್ವದ ಗಮನವನ್ನು ಸೆಳೆದಿದೆ.2030ರ ಹೊತ್ತಿಗೆ ಭಾರತವು 7.3 ಟ್ರಿಲಿಯನ್ ಡಾಲರ್ ಆರ್ಥಿಕತೆಯೊಂದಿಗೆ ಜಗತ್ತಿನ ಮೂರನೇ ಬೃಹತ್ ಅರ್ಥ ವ್ಯವಸ್ಥೆಯಾಗಿ ರೂಪುಗೊಳ್ಳುವುದು ನಿಶ್ಚಿತ ಎಂದು ಎಸ್&ಪಿ ಸ್ಟೇಟ್ಸ್ ಪ್ರಕಟಿಸಿದ ವರದಿ ತಿಳಿಸಿದೆ. ಅರ್ಥ ವ್ಯವಸ್ಥೆಯಲ್ಲಿನ ಈ ಪರಿಯ ಚೇತರಿಕೆಗೆ ಕಳೆದ ಒಂದು ದಶಕದ ಅವಧಿಯಲ್ಲಿ ಕೈಗೊಳ್ಳಲಾದ ನೀತಿ ಉಪಕ್ರಮಗಳೇ ಕಾರಣ ಎನ್ನಲಾಗುತ್ತದೆ. ಪ್ಯಾಂಡಮಿಕ್ ಮತ್ತು ಭೌಗೋಳಿಕ ರಾಜಕೀಯ ಸಂಘರ್ಷಗಳು ಒಡ್ಡಿದ ಸವಾಲುಗಳ ಹೊರತಾಗಿಯೂ ಭಾರತದ ಆರ್ಥಿಕತೆ ಎಲ್ಲವನ್ನೂ ಸಮರ್ಪಕವಾಗಿ ನಿಭಾಯಿಸುವ ಸಾಮರ್ಥ್ಯ ತೋ–ರಿಸಿರುವುದು ಹಾಗೂ ಪ್ರಗತಿಯ ಗತಿಯಲ್ಲಿ ಚಾಲ್ತಿಯಲ್ಲಿರುವುದು ಗಮನಾರ್ಹ

ಒಳ ಪುಟ ನೋಟ

BUY NOW & PAY LATER: ವರವೋ ಶಾಪವೋ? 3




ಆರೋಗ್ಯ ವಿಮೆಯಲ್ಲಿ ನೋ ಕ್ಲೈಮ್ ಬೋನಸ್ 5






ಸಂಗತಿಯಾಗಿದೆ.

ಕಳೆದ ವರ್ಷದಲ್ಲಿ ಭಾರತವು ಸ್ಥಿರವಾದ ಪ್ರಗತಿಯನ್ನು ಪ್ರದರ್ಶಿಸುವ ಮೂಲಕ ಜಿ20 ಆರ್ಥಿಕ ರಾಷ್ಟ್ರಗಳಲ್ಲಿ ತೀವ್ರಗತಿಯಲ್ಲಿ ಪ್ರಗತಿ ಹೊಂದುತ್ತಿರುವ ರಾಷ್ಟ್ರ ಎಂಬ ಖ್ಯಾತಿಗೆ ಪಾತ್ರವಾಗಿದೆ. ಪ್ರಸಕ್ತ ಪ್ರಗತಿ ದರವಾದ ಶೇ.7.3 ಹಾಗೂ ಹಣಕಾಸು ವರ್ಷ 23ರಲ್ಲಿ ಶೇ.7.2 ಹಾಗೂ ಹಣಕಾಸು ವರ್ಷ22ರಲ್ಲಿ ಶೇ.9.1ರ ದರದೊಂದಿಗೆ ಭಾರತವು ಜಾಗತಿಕ ಪ್ರಗತಿ ದರವನ್ನು ಹಿಂದಿಕ್ಕುವಲ್ಲಿ ಯಶಸ್ವಿಯಾಗಿದೆ.

ಇಷ್ಟು ಮಾತ್ರವಲ್ಲದೆ ಈ ವರ್ಷ ಅನೇಕ ಸಾಧನೆಗಳನ್ನು ಮಾಡುವ ಮೂಲಕ ಇತಿಹಾಸದಲ್ಲಿ ತನ್ನ ಹೆಸರನ್ನು ಅಚ್ಚಳಿಯದೆ ಉಳಿಯುವಂತೆ ಮಾಡಿದೆ. ಇವುಗಳನ್ನು ಪಟ್ಟಿ ಮಾಡುವುದಾದರೆ ಚಂದ್ರನ ದಕ್ಷಿಣ ಧ್ರುವದಲ್ಲಿ 'ಸಾಫ್ಟ್ ಲ್ಯಾಂಡ್' ಮಾಡಿದ ಮೊದಲ ರಾಷ್ಟ್ರ, ಸೂರ್ಯನ ಬಾಹ್ಯ ಕಕ್ಷೆಗೆ ಆದಿತ್ಯ ಎಲ್–1 ಅನ್ನು ಯಶಸ್ವಿಯಾಗಿ ಉಡಾವಣೆ ಮಾಡಿರುವುದು, ಜಿ–20 ಶೃಂಗಸಭೆಯಲ್ಲಿ ಅಧ್ಯಕ್ಷತೆಯನ್ನು ವಹಿಸಿದ್ದು, ಯುಪಿಐ ಬಳಕೆದಾರರ ಸಂಖ್ಯೆ 800 ಮಿಲಿಯನ್ ತಲುಪಿದ್ದು, ಏಷ್ಯನ್ ಗೇಮ್ಸ್‌ನಲ್ಲಿ ಅಭೂತಪೂರ್ವ ನಿರ್ವಹಣೆ ತೋರಿದ್ದು, ಎರಡು ಆಸ್ಕರ್ ಪ್ರಶಸ್ತಿಗಳನ್ನು ದಕ್ಕಿಸಿಕೊಂಡಿದ್ದು, ವಿಶ್ವದಲ್ಲಿಯೇ ಅತಿ ಶೀಘ್ರದಲ್ಲಿ 5ಜಿ ಜಾಲವನ್ನು ಜಾರಿಗೆ ತಂದಿದ್ದು ಇತ್ಯಾದಿ. ಈ ಎಲ್ಲ ಸಾಧನೆಗಳು ನಮ್ಮ ರಾಷ್ಟ್ರಕ್ಕೆ ಉಜ್ವಲವಾದ ಭವಿಷ್ಯವಿದೆ ಎಂಬುದಕ್ಕೆ ಸಾಕ್ಷಿಯಾಗಿವೆ. ಭಾರತದ ಈ ಪ್ರಗತಿಯ ಕಥೆಯನ್ನು ಇನ್ನಷ್ಟು ವಿವರವಾಗಿ ಪರಿಶೀಲಿಸೋಣ.

**ಸ್ವಾತಂತ್ರ್ಯಾನಂತರದ ಕಥೆ (1947–2014):**

1947ರಲ್ಲಿ ನಮಗೆ ಅಂತಿಮವಾಗಿ ಸ್ವಾತಂತ್ರ್ಯ ಸಿಗುವುದಕ್ಕೂ ಮೊದಲು ಬ್ರಿಟಿಷರು ಭಾರತವನ್ನು ಆಳಿದ್ದು 200 ವರ್ಷಗಳ ಕಾಲ. ಆದರೆ ಇದರ ಪರಿಣಾಮವಾಗಿ ಸಂಪದ್ಭರಿತ ರಾಷ್ಟ್ರಗಳಲ್ಲಿ ಒಂದಾಗಿದ್ದ ಭಾರತವು ಅತ್ಯಂತ ಸಂಕಟದ ಆರ್ಥಿಕ ಸ್ಥಿತಿಯನ್ನು ಹೊಂದಿದ ರಾಷ್ಟ್ರವಾಯಿತು. 1700ರಲ್ಲಿ ಜಗತ್ತಿನ ಆರ್ಥಿಕತೆಯಲ್ಲಿ ಭಾರತದ ಪಾಲು ಶೇ.22.6ರಷ್ಟಿತ್ತು. 1952ರಲ್ಲಿ* ಅದು ಅತ್ಯಂತ ಕನಿಷ್ಠ, ಅಂದರೆ ಶೇ.3.8ಕ್ಕೆ ಕುಸಿದಿತ್ತು. 1952ರಿಂದ 1960ರ ನಡುವಿನ ಪ್ರಗತಿ ದರ ಶೇ.3.9.ಆದರೆ ಆ ಬಳಿಕ 60ರ ದಶಕದಲ್ಲಿ ಒಂದರ ಮೇಲೆ ಒಂದರಂತೆ ಯುದ್ಧಗಳು ಬಂದು ವಕ್ಕರಿಸಿಕೊಂಡವಲ್ಲ? ಪರಿಸ್ಥಿತಿ ಇನ್ನಷ್ಟು ಹದಗೆಟ್ಟಿತು. 1962ರಲ್ಲಿ ಸಂಭವಿಸಿದ ಚೀನಾ–ಭಾರತ ಯುದ್ಧ, 1965–66ರ ಭಾರತ–ಪಾಕಿಸ್ತಾನ ಯುದ್ಧ ಮತ್ತು 1965ರಲ್ಲಿ ಸಂಭವಿಸಿದ ಕ್ಷಾಮ... ಇವೆಲ್ಲವೂ ಭಾರತದ ಅರ್ಥ ವ್ಯವಸ್ಥೆಯನ್ನು ಸಂಕಷ್ಟಕ್ಕೆ ಸಿಲುಕಿಸಿತು.

ಎಪ್ಪತ್ತರ ದಶಕದಲ್ಲಿ ಭಾರತೀಯ ರೂಪಾಯಿಯ ತೀವ್ರ ಅಪಮೌಲ್ಯ ಉಂಟಾಯಿತು, ಅಂದರೆ ಶೇ.57ರಷ್ಟು. 70ರ ದಶಕದ ಕೊನೆಯ ಭಾಗ ಮತ್ತು 80ರ ದಶಕದ ಆರಂಭಿಕ ಕಾಲಘಟ್ಟ ಕೇವಲ ಭಾರತಕ್ಕೆ ಮಾತ್ರವಲ್ಲ ಇಡೀ ಜಗತ್ತಿನಲ್ಲಿ ಅವ್ಯವಸ್ಥೆ ತಾಂಡವವಾಡುತ್ತಿತ್ತು. ಅತ್ಯಂತ ಸಾಧಾರಣ ಎನ್ನುವ ಉದಾರೀಕರಣ ಮತ್ತು ಸರ್ಕಾರಿ ವೆಚ್ಚಗಳ ನಡುವೆ 80ರ ದಶಕದಲ್ಲಿದ್ದ ಜಿಡಿಪಿ ಪ್ರಗತಿ ದರ ಶೇ.5.7**. 1990–91 ಇರಾಕ್–ಕುವೇತ್ ಯುದ್ಧ ಮತ್ತು ಸೋವಿಯತ್ ಒಕ್ಕೂಟದ ಪತನಕ್ಕೆ ಸಾಕ್ಷಿಯಾಯಿತು. ಇದರಿಂದ ವಾಣಿಜ್ಯ ಮತ್ತು ಚಾಲ್ತಿ ಖಾತೆ ಬಾಕಿಗಳ ಮೇಲೆ ಪರಿಣಾಮ ಉಂಟಾಗಿ ಬಾಕಿ–ಪಾವತಿಗಳ ಬಿಕ್ಕಟ್ಟು ತಲೆದೋರಿತು. ಇಂತಹ ಬಿಕ್ಕಟ್ಟಿನಿಂದ ಭಾರತವನ್ನು ಮೇಲಕ್ಕೆತ್ತಲು ಭಾರತೀಯ ಅರ್ಥ ವ್ಯವಸ್ಥೆಯನ್ನು ಉದರೀಕರಣ ಮತ್ತು ಜಾಗತೀಕರಣದ ವ್ಯಾಪ್ತಿಗೆ ತಂದಿದ್ದು 1991ರಲ್ಲಿ.

2000ರ ಆರಂಭಿಕ ದಿನಗಳಲ್ಲಿ ಆರ್ಥಿಕತೆ ಏರುಗತಿಯಲ್ಲಿ ಸಾಗಿತು. ಜಾಗತಿಕ ಪ್ರಗತಿಯೊಂದಿಗೆ ಭಾರತದ ಆರ್ಥಿಕತೆ ಕೂಡ ಬಂಡವಾಳದ ಒಳಹರಿವಿನಿಂದಾಗಿ ವಿಸ್ತರಣೆಗೆ ದಾಪುಗಾಲು ಇಟ್ಟಿತು. ಅಂತಹ ಕಾಲಘಟ್ಟದಲ್ಲಿಯೇ ಅಂದರೆ 2008ರಲ್ಲಿ ಉಂಟಾದ ಜಾಗತಿಕ ಹಣಕಾಸು ಬಿಕ್ಕಟ್ಟು ಬ್ಯಾಂಕ್‌ಗಳಲ್ಲಿ bad debtಗಳ ಸಂಗ್ರಹ ಬೆಳೆಯಲು ದಾರಿಮಾಡಿತು. ಇಂತಹ ಅವಧಿಯಲ್ಲಿ ಹಣದುಬ್ಬರ ಏರುಗತಿಯಲ್ಲಿತ್ತು. ಭಾರತೀಯ ರೂಪಾಯಿಯ ವಾರ್ಷಿಕ ಸವಕಳಿ ಸರಾಸರಿ ಶೇ.5.9ರಷ್ಟಿತ್ತು. ಈ ಕಾರಣದಿಂದ ಆರ್ಥಿಕ ಪ್ರಗತಿ ನಿಂತಲ್ಲೇ ಸ್ಥಿರವಾಗಿತ್ತು ಎಂದು ಹೇಳುವುದು ಸೂಕ್ತ.

**ಸ್ಫೋಟಕ ಪ್ರಗತಿಯ ದಶಕ–2014–2024:**

ಭಾರತದ ಮಟ್ಟಿಗೆ ಬಹುದೊಡ್ಡ ತಿರುವು ಎಂದರೆ 2014. ಈ ನಾಡಿನಲ್ಲಿ ಸ್ಫೋಟಕ ಪ್ರಗತಿಗೆ ಬೀಜ ಬಿತ್ತಿದ್ದು ಈ ವರ್ಷದಲ್ಲಿಯೇ. ಭಾರತದಲ್ಲಿ ಹೊಸ ಸರ್ಕಾರ ಅಸ್ತಿತ್ವಕ್ಕೆ ಬರುವುದರೊಂದಿಗೆ ಒಂದು ವರ್ಷ ಕಾಲ ರಚನಾತ್ಮಕ ಸುಧಾರಣೆಗಳು ನಡೆದವು. ಇದು ಬೃಹತ್ ಆರ್ಥಿಕತೆಯ ಮೂಲಭೂತ ಅಂಶಗಳನ್ನು ಬಲಪಡಿಸುವಲ್ಲಿ ಅತ್ಯಂತ ಪರಿಣಾಮಕಾರಿಯಾಗಿತ್ತು. ಕಳೆದ ಒಂದು ದಶಕದ ಅವಧಿಯಲ್ಲಿ ಭಾರತವು ಸಾರಿಗೆ ಸೌಲಭ್ಯಗಳನ್ನು ಮತ್ತು ಶಿಕ್ಷಣ ವ್ಯವಸ್ಥೆಯನ್ನು ಬಲಪಡಿಸಿದೆ, ಪ್ಯಾಂಡಮಿಕ್ ಸ್ಥಿತಿಯನ್ನು ಪರಿಣಾಮಕಾರಿಯಾಗಿ ನಿಭಾಯಿಸಿದೆ, ಸ್ಥಳೀಯ ಮೂಲಸೌಕರ್ಯಗಳನ್ನು ಸುಧಾರಿಸಿದೆ. ಆರೋಗ್ಯ ವ್ಯವಸ್ಥೆಯನ್ನು ಕೈಗೆಟುಕುವಂತೆ ಮಾಡಿದೆ, ಉದ್ಯಮಿಗಳಿಗೆ ನೆರವಾಗಿದೆ, ಮೂಲಭೂತ ಸೌಕರ್ಯಗಳನ್ನು ಒದಗಿಸಿದೆ ಮತ್ತು ಸಾಮಾಜಿಕ ಭದ್ರತೆಯನ್ನು ಇನ್ನಷ್ಟು ಸುಧಾರಿಸಿದೆ.

ಈ ದಶಕದಲ್ಲಿ ಸ್ವಾತಂತ್ರ್ಯ ಪಡೆದ 67 ವರ್ಷಗಳ ಬಳಿಕ ಭಾರತವು ವಿಮಾನ ನಿಲ್ದಾಣಗಳ ಸಂಖ್ಯೆಯನ್ನು ಎರಡು ಪಟ್ಟು ಹೆಚ್ಚಿಸಿದೆ. ವೆಚ್ಚವನ್ನು ತಗ್ಗಿಸಿ ಸರಕು ಸಾಗಣೆ ದಕ್ಷತೆಯನ್ನು ಹೆಚ್ಚಿಸಲು ಮೂರು ರೈಲ್ವೆ ಕಾರಿಡಾರ್‌ಗಳನ್ನು ನಿರ್ಮಿಸಲಾಗಿದೆ. ಹೊಸ ಕಾಲೇಜುಗಳು ಆರಂಭವಾಗಿರುವುದರ ಜೊತೆಗೆ 2014ರಿಂದ ಈಚೆಗೆ ಏಳು ಐಐಟಿಗಳು, 16 ಐಐಐ–

ಟಿಗಳು, 7ಐಐಎಂಗಳು ಮತ್ತು 15ಎಐಐಎಂಗಳನ್ನು ಸ್ಥಾಪಿಸಲಾಗಿದೆ. STEM ಕೋರ್ಸ್‌ಗಳಲ್ಲಿ ಮಹಿಳಾ ನೋಂದಣಿ ಶೇ.43ಕ್ಕೆ ಏರಿಕೆಯಾಗಿರುವುದು ವಿಶ್ವದಲ್ಲಿಯೇ ಅತ್ಯುತ್ತಮ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. **ಪ್ರಧಾನ ಮಂತ್ರಿ ಆವಾಸ್ ಯೋಜನೆ** ಅಡಿಯಲ್ಲಿ ಎರಡೂವರೆ ಕೋಟಿ ಮನೆಗಳನ್ನು ಬಡವರಿಗಾಗಿ ನಿರ್ಮಿಸಲಾಗಿದೆ. **ಪ್ರಧಾನ ಮಂತ್ರಿ ಜನಧನ್ ಯೋಜನೆ** ಅಡಿಯಲ್ಲಿ 51.4 ಕೋಟಿ ಖಾತೆಗಳನ್ನು ತೆರೆಯಲಾಗಿದೆ ಮತ್ತು **ಅಟಲ್ ಪಿಂಚಣಿ ಯೋಜನೆ** ಅಡಿಯಲ್ಲಿ ಚಂದಾದಾರರ ಸಂಖ್ಯೆ 6.1 ಕೋಟಿ ತಲುಪಿದೆ. **ಸ್ಟಾಂಡ್-ಅಪ್ ಇಂಡಿಯಾ** ಕಾರ್ಯಕ್ರಮದ ಅಡಿಯಲ್ಲಿ 2.1 ಲಕ್ಷ ಸಾಲಗಳನ್ನು ಉದಯೋನ್ಮುಖ ಉದ್ಯಮಿಗಳಿಗೆ ಮಂಜೂರು ಮಾಡಲಾಗಿದೆ. ಇವರಲ್ಲಿ ಶೇ.84ರಷ್ಟು ಮಹಿಳಾ ಉದ್ಯಮಿಗಳು. ಈಗ ಭವಿಷ್ಯದಲ್ಲಿ ಭಾರತ ಹೇಗೆ ನಿರ್ವಹಣೆ ತೋರಲಿದೆ ಎಂಬುದರ ಕಡೆಗೆ ಗಮನ ಹರಿಸೋಣ.

**ಅಮೃತ ಕಾಲದಲ್ಲಿ ಭಾರತ:** 2047ರ ಹೊತ್ತಿಗೆ ಭಾರತ ಸ್ವಾತಂತ್ರ್ಯ ಗಳಿಸಿ 100 ವರ್ಷ ತುಂಬಲಿದೆ. ಇಲ್ಲಿಂದ 2047ರ ವರೆಗಿನ ಅವಧಿಯನ್ನು ಅಮೃತ ಕಾಲ ಎಂದು ಕರೆಯಲಾಗಿದೆ. ಧನಾತ್ಮಕ ಚಿಂತನೆ, ಆರೋಗ್ಯಪೂರ್ಣ ಪ್ರಗತಿ ಮತ್ತು ಅತ್ಯಧಿಕ ಶಕ್ತಿಯೊಂದಿಗೆ ಈ ಅವಧಿಯನ್ನು ಅತ್ಯಂತ ಪವಿತ್ರ ಎಂದು ಘೋಷಿಸಲಾಗಿದೆ. ಆಧುನಿಕ ತಂತ್ರಜ್ಞಾನ ಆಧಾರಿತ ಮತ್ತು ಜ್ಞಾನಾಧಾರಿತವಾಗಿರುವ ಸಮಗ್ರ ಅಭಿವೃದ್ಧಿ ಹೊಂದಿದ ಭಾರತವನ್ನು ಕಟ್ಟುವುದು ಅಮೃತ ಕಾಲ ಕಾರ್ಯಕ್ರಮದ ಗುರಿ. ಇದಕ್ಕೆ ಅತ್ಯಾಧುನಿಕ ಮೂಲಸೌಕರ್ಯ, ಬಲಿಷ್ಠವಾದ ಸರ್ಕಾರಿ ಹಣಕಾಸು ಸೌಲಭ್ಯದ ಬೆಂಬಲ ನೀಡಲಾಗುತ್ತದೆ.

2024ರ ಫೆಬ್ರುವರಿ ಒಂದರಂದು ಮಧ್ಯಂತರ ಬಜೆಟ್ ಮಂಡಿಸಿದ ಹಣಕಾಸು ಸಚಿವ ನಿರ್ಮಲಾ ಸೀತಾರಾಮನ್, 2047ರ ಹೊತ್ತಿಗೆ ಭಾರತವನ್ನು **'ವಿಕಸಿತ'**ವಾಗಿ ರೂಪಿಸಲು ನಾಲ್ಕು ಪ್ರಮುಖ ಕ್ಷೇತ್ರಗಳ ಅಭಿವೃದ್ಧಿಯ ಕಡೆಗೆ ಗಮನ ಕೇಂದ್ರೀಕರಿಸಬೇಕು ಎಂದು ಹೇಳಿದ್ದರು. ಆ ನಾಲ್ಕು ಪ್ರಮುಖ ಕ್ಷೇತ್ರಗಳೆಂದರೆ; ಬಡವರು, ರೈತರು, ಮಹಿಳೆಯರು ಮತ್ತು ಯುವಕರು. ಇವೆಲ್ಲಕ್ಕಿಂತ ಮುಖ್ಯವಾಗಿ ಅಮೃತ ಕಾಲದ ದೂರದೃಷ್ಟಿಗೆ ಮಾರ್ಗದರ್ಶನ ನೀಡಲು ಏಳು ಆದ್ಯತೆಗಳನ್ನು ಗುರುತಿಸಲಾಗಿದೆ. **'ಸಪ್ತರ್ಷಿಗಳು'** ಎಂದು ವಿಶ್ಲೇಷಿಸಲಾಗಿರುವ ಇವುಗಳು ಹೀಗಿವೆ; ಎಲ್ಲರನ್ನೂ ಒಳಗೊಳ್ಳುವ ಅಭಿವೃದ್ಧಿ, ಅಂತಿಮ ಗುರಿ ತಲುಪುವುದು, ಮೂಲ ಸೌಕರ್ಯ ಹಾಗೂ ಹೂಡಿಕೆ, ಸಾಮರ್ಥ್ಯವನ್ನು ಒರೆಗೆ ಹಚ್ಚುವುದು, ಹಸಿರು ಪ್ರಗತಿ, ಯುವಶಕ್ತಿ ಮತ್ತು ಹಣಕಾಸು ವಲಯ.

ಇವೆಲ್ಲದರ ಜೊತೆಗೆ 2070ರ ಹೊತ್ತಿಗೆ ಸಂಪೂರ್ಣ ಶೂನ್ಯ ವಾಯುಮಾಲಿನ್ಯವನ್ನು ಸಾಧಿಸುವುದು ರಾಷ್ಟ್ರದ ಗುರಿಯಾಗಿದೆ. ಈ ನಿಟ್ಟಿನಲ್ಲಿ ವಿಶ್ವಸಂಸ್ಥೆಯ ಎಲ್ಲ ಸುಸ್ಥಿರ ಅಭಿವೃದ್ಧಿ ಗುರಿಗಳನ್ನು (ಎಸ್‌ಡಿಜಿ) ಪೂರೈಸಲು ರಾಷ್ಟ್ರವು ಸಂಪೂರ್ಣ ಬದ್ಧವಾಗಿದೆ. ರಾಜ್ಯದಲ್ಲಿ ಪ್ರವಾಸೋದ್ಯಮವನ್ನು ಉತ್ತೇಜಿಸಲು ಪ್ರಸಿದ್ಧ ಪ್ರವಾಸಿ ತಾಣಗಳನ್ನು ಅಭಿವೃದ್ಧಿಪಡಿಸಲು ರಾಜ್ಯಗಳಿಗೆ ಹೆಚ್ಚಿನ ಪ್ರೋತ್ಸಾಹವನ್ನು ನೀಡಲಾಗುತ್ತದೆ. ಆ ಮೂಲಕ ಸ್ಥಳೀಯ ಉದ್ಯಮಶೀಲತೆಯನ್ನು ಆಕರ್ಷಿಸುವುದು ಉದ್ದೇಶ. ಸಮಗ್ರ ಅಭಿವೃದ್ಧಿಯ ಹಿನ್ನೆಲೆಯಲ್ಲಿ ರಾಜ್ಯಗಳಿಗೆ ಸುದೀರ್ಘಾವಧಿಯ ಬಡ್ಡಿರಹಿತ ಸಾಲಗಳನ್ನು ಒದಗಿಸಲಾಗುತ್ತದೆ.

ಮುಂಬರುವ ವರ್ಷಗಳಲ್ಲಿ ಭಾರತದಲ್ಲಿ ಗಣನೀಯ ಪ್ರಗತಿ ದಿನಗಳು ಕಾಣುವ ನಿರೀಕ್ಷೆಯಿದೆ.

ಕೋವಿಡ್-19 ಪ್ಯಾಂಡಮಿಕ್‌ನಂತಹ ಕಠಿಣ ಕಾಲಘಟ್ಟದಲ್ಲಿ ನಮ್ಮ ದೇಶ ತೋರಿದ ಚೇತರಿಕೆಯೇ ಭಾರತದ ಶಕ್ತಿ ಹಾಗೂ ಸಾಮರ್ಥ್ಯಕ್ಕೆ ತಕ್ಕ ಸಾಕ್ಷಿಯಾಗಿದೆ. ಅತ್ಯಂತ ಕಠಿಣ ಸವಾಲುಗಳ ಹೊರತಾಗಿಯೂ ಭಾರತವು ತೋರಿದ ಹೊಸತನ, ಹೊಂದಿಕೊಳ್ಳುವ ಗುಣ, ತಂತ್ರಜ್ಞಾನದ ಬಳಕೆ ಮತ್ತು ಏಕತೆಯ ಸ್ಫೂರ್ತಿಯನ್ನು ಪೋಷಿಸುವ ವಿಚಾರದಲ್ಲಿ ಅಭೂತಪೂರ್ವ ಸಾಧನೆಯನ್ನು ಮಾಡಿದೆ. ಭಾರತದ ಆರ್ಥಿಕತೆಯ ಪ್ರಗತಿಯ ಮುಂದೆ ಇರುವ ಸವಾಲುಗಳೂ ದೊಡ್ಡದಿದೆ. ಅತ್ಯಂತ ಸಮಗ್ರವಾಗಿ ಜಾಗತಿಕ ಅರ್ಥ ವ್ಯವಸ್ಥೆಯನ್ನು ಪರಿಣಾಮಕಾರಿಯಾಗಿ ನಿಭಾಯಿಸಬೇಕಾಗಿದೆ, ಭೌಗೋಳಿಕ ರಾಜಕೀಯ, ತಂತ್ರಜ್ಞಾನದ ಸವಾಲುಗಳು, ವಿತ್ತೀಯ, ಆರ್ಥಿಕ ಮತ್ತು ಸಾಮಾಜಿಕ ವಿಚಾರಗಳ ಜೊತೆಗೆ ಕೃತಕ ಬುದ್ಧಿಮತ್ತೆ (ಎಐ)ಯನ್ನು ಸಮರ್ಥವಾಗಿ ನಿರ್ವಹಿಸುವ ಅಗತ್ಯ ಕೂಡ ಇದೆ. ಹಿಂದೆಯೂ ಅಪಾಯ ಹಾಗೂ ಅನಿಶ್ಚಿತತೆಯ ನಡುವೆಯೂ ಭಾರತವು ಚೇತರಿಕೆ ಮತ್ತು ಪ್ರಗತಿಯನ್ನು ದಾಖಲಿಸಿದ ಇತಿಹಾಸವಿದೆ. ಇನ್ನು ಮುಂದೆಯೂ ಅಂತಹ ಪ್ರಯತ್ನಗಳು ನಿರಂತರವಾಗಿ ನಡೆಯುತ್ತಿರುತ್ತವೆ ಎಂಬ ಆಶಾವಾದ ಹೊಂದಲಾಗಿದೆ. ಹಾಗಾಗಿ ಭಾರತ ಇಂದು ಆತ್ಮವಿಶ್ವಾಸ, ನಂಬಿಕೆ ಮತ್ತು ಸಮಗ್ರತೆಯೊಂದಿಗೆ ಅಮೃತಕಾಲ ಪಯಣವನ್ನು ಮುನ್ನಡೆಸುತ್ತದೆ ಪ್ರಗತಿಪರ ಹಾಗೂ ಆತ್ಮನಿರ್ಭರ ರಾಷ್ಟ್ರವನ್ನು ಕಟ್ಟುವ ಸಿದ್ಧತೆಯಲ್ಲಿದೆ.

**(**Source** - The Indian Economy - A Review - Jan 2024),
*(Source - IMF, as in 2023).

# BUY NOW & PAY LATER

## ವರವೋ ಶಾಪವೋ?



ಕೆಲವೇ ಕೆಲವು ಹಿಂದಿನ ದಿನಗಳನ್ನು ನೆನಪು ಮಾಡಿಕೊಳ್ಳಿ, ನಮ್ಮ ಎಲ್ಲ ಖರೀದಿಗಳಿಗೆ ನಮ್ಮೂರಿನ ಪಕ್ಕದ ಅಂಗಡಿಗಳಿಗೆ ಹೋಗುತ್ತಿದ್ದೆವು.ನಮಗೆ ಬೇಕಾದ ಬಟ್ಟೆ, ಪುಸ್ತಕಗಳು, ಗ್ಯಾಜೆಟ್‌ಗಳು ಮತ್ತು ಇತರ ಅಗತ್ಯ ವಸ್ತುಗಳನ್ನು ಅಂಗಡಿಗಳಿಂದಲೇ ಕೊಂಡು ಬರುತ್ತಿದ್ದೆವು.ಆದರೆ ಈಗ? ಆನ್‌ಲೈನ್ ಮಾರುಕಟ್ಟೆ ವ್ಯವಸ್ಥೆ ಬಂದ ಮೇಲೆ ನಾವು ಕೊಳ್ಳುವ ಜಗತ್ತೇ ಬದಲಾಗಿ ಹೋಗಿದೆ.ಫ್ಲಿಪ್‌ಕಾರ್ಟ್ ಮತ್ತು ಅಮೆಜಾನ್‌ನಂತಹ ಆನ್‌ಲೈನ್ ಮಾರುಕಟ್ಟೆ ತಾಣಗಳಿಂದಾಗಿ ಸಾವಿರಾರು ಉತ್ಪನ್ನಗಳು ನಮ್ಮ ಬೆರಳ ತುದಿಯಲ್ಲಿಯೇ ಸಿಗುವಂತಾಗಿವೆ. ಅದೂ ಕೂಡ ಸ್ಪರ್ಧಾತ್ಮಕ ಬೆಲೆಗಳಿಗೆ.

ಗ್ರಾಹಕರ ಖರೀದಿ ಅಭ್ಯಾಸಗಳು ಬದಲಾಗಿವೆ. ಜೊತೆಗೆ ಪಾವತಿ ಮಾಡಲೂ ನೂರಾರು ಮಾರ್ಗಗಳು ಹುಟ್ಟಿಕೊಂಡಿವೆ. ಸಾಮಾನ್ಯವಾಗಿ ನಾವು ಪ್ರಮುಖ ಆನ್‌ಲೈನ್ ತಾಣಗಳಲ್ಲಿ ಶಾಪಿಂಗ್ ಮಾಡುತ್ತಿದ್ದಾಗ BNPL

ಪಾವತಿ ಯೋಜನೆಗಳನ್ನು ನೋಡುತ್ತೇವೆ. ಇವು ನಮ್ಮ ಆನ್‌ಲೈನ್ ಶಾಪಿಂಗ್ ಅನುಭವವನ್ನು ಹೆಚ್ಚಿಸುತ್ತದೆ. BNPL –ಇದರ ಪೂರ್ಣ ವಿವರ– ಈಗ ಖರೀದಿಸಿ ಬಳಿಕ ಪಾವತಿಸಿ (buy now pay later) ಎನ್ನುವುದಾಗಿದೆ. ಸರಳವಾಗಿ ಹೇಳುವುದಾದರೆ ಇದೊಂದು ಹೊಸ ಕ್ರೆಡಿಟ್ ಸ್ಕೀಮ್. ಇದರಿಂದ ಗ್ರಾಹಕರ ಬಳಿ ಹಣ ಇಲ್ಲದೇ ಹೋದರೂ ತಕ್ಷಣ ಉತ್ಪನ್ನವನ್ನು ಖರೀದಿ ಮಾಡುವ ಶಕ್ತಿಯನ್ನು ನೀಡುತ್ತದೆ. ಪಾವತಿಯನ್ನು ತಮಗೆ ಅನುಕೂಲವಾದ ಸಮಯದಲ್ಲಿ ಮತ್ತು ಕಂತುಗಳಲ್ಲಿ ಮಾಡಲು ಅವಕಾಶವನ್ನು ಒದಗಿಸುತ್ತದೆ.

ಶಾಪಿಂಗ್ ಕ್ಷೇತ್ರದಲ್ಲಿ ಇದೊಂದು ಕ್ರಾಂತಿಕಾರಿ ಹೆಜ್ಜೆ ಎಂದು ವಾದಿಸಲಾಗುತ್ತದೆ. ಆದರೂ BNPL ಪರಿಕಲ್ಪನೆ ನಿಮ್ಮ ಸಾಲದ ಪ್ರವೃತ್ತಿಯನ್ನು ಅಧಿಕೃತವಾಗಿ ಹೆಚ್ಚಿಸುವುದು ಇದರ ಉದ್ದೇಶ. ನಿಮ್ಮ ಬಳಿ ಕ್ರೆಡಿಟ್ ಕಾರ್ಡ್ ಇದ್ದರೆ ನೀನು ಕ್ರೆಡಿಟ್ ಆಧಾರದಲ್ಲಿ ಖರೀದಿ ಮಾಡುತ್ತೀರಿ ಮತ್ತು ಅದರ ಪಾವತಿಯನ್ನು ಕೆಲ ದಿನಗಳ ಬಳಿಕ ಮಾಡುತ್ತೀರಿ. ಇದೂ ಕೂಡ ಒಂದು ರೀತಿಯಲ್ಲಿ BNPL ಎಂದೇ ಲೆಕ್ಕ. ಹಾಗಾದರೆ ಈ ಹೊಸ ರೀತಿಯ ಕ್ರೆಡಿಟ್ ವ್ಯವಸ್ಥೆ ಅತ್ಯಂತ ಕಡಿಮೆ ಅವಧಿಯಲ್ಲಿ ಇಷ್ಟೊಂದು ಯಶಸ್ವಿಯಾಗಲು ಹೇಗೆ ಸಾಧ್ಯವಾಯಿತು?

ಇಂತಹುದೊಂದು ಸಾಲದ ವಿಧಾನ ಯಶಸ್ವಿಯಾಗಲು ಇರುವ ಬಹುಮುಖ್ಯ ಕಾರಣವೆಂದರೆ ಗ್ರಾಹಕರ ವಿಧಾನಗಳಲ್ಲಿ ಮತ್ತು ಅವರ ಪಾವತಿ ವಿಧಾನಗಳಲ್ಲಿ ಆಗಿರುವ ಬದಲಾವಣೆ. ಗ್ರಾಹಕರ ಆನ್‌ಲೈನ್ ಕೊಳ್ಳುವಿಕೆಯಲ್ಲಿ ಕೋವಿಡ್ ಪ್ಯಾಂಡಮಿಕ್ ನಿಸ್ಸಂಶಯವಾಗಿ ಪ್ರಭಾವ ಬೀರಿದೆ ಎನ್ನುವುದರಲ್ಲಿ ಯಾವುದೇ ಅನುಮಾನವಿಲ್ಲ. ಮನುಷ್ಯ–ಮನುಷ್ಯರ ನಡುವೆ ಸಂಪರ್ಕವೇ ಇಲ್ಲದೆ ನಗದು ರಹಿತ ಪಾವತಿ ಮೂಲಕ ಖರೀದಿ ಮಾಡುವ ಪರಿಸ್ಥಿತಿ ನಿರ್ಮಾಣವಾಯಿತು. ಈ ಹೊಸ ವಿಧಾನ ಕ್ರಮೇಣ ಜನಪ್ರಿಯತೆಯನ್ನು ಪಡೆದುಕೊಂಡಿತು. ಜನ ಬಹುಬೇಗ ಅದಕ್ಕೆ ಒಗ್ಗಿಹೋದರು ಕೂಡ.

ಈಗ ಖರೀದಿಸಿ ಬಳಿಕ ಪಾವತಿಸಿ ಎಂಬ ಯೋಜನೆಯ ಹೆಸರೇ ಅತ್ಯಂತ ಆಕರ್ಷಕವಾಗಿದೆ. ಆನ್‌ಲೈನ್‌ನಲ್ಲಿ ಒಂದು ಉತ್ಪನ್ನವನ್ನು ಆಯ್ಕೆ ಮಾಡಿಕೊಂಡ ಬಳಿಕ ಪಾವತಿಸಲು ಒಬ್ಬನ 'ಕ್ರೆಡಿಟ್ ಲಿಮಿಟ್' (ಸಾಲದ ಮಿತಿ)ಯನ್ನು ಹೆಚ್ಚಿಸಬೇಕಾದ ಅಗತ್ಯವಿರುವುದಿಲ್ಲ. ಸಾಲದ ಅರ್ಹತೆಯನ್ನು ಸಾಬೀತು ಮಾಡುವ ಅಥವಾ ದಾಖಲೆಗಳನ್ನು ಸಲ್ಲಿಸುವ ಗೋಜಲುಗಳಿರುವುದಿಲ್ಲ. ಬಿಎನ್‌ಪಿಎಲ್ ಸಾಲ ಯೋಜನೆಯನ್ನು ಆಯ್ಕೆ ಮಾಡಿಕೊಳ್ಳುವ ಗ್ರಾಹಕರು ಒಟ್ಟಾರೆ ಖರೀದಿ ಪ್ರಕ್ರಿಯೆಯನ್ನು ತೀರಾ ಸರಳವಾಗಿ ಮುಗಿಸಿಬಿಡಬಹುದು. ಜೊತೆಗೆ ಇದು ಗ್ರಾಹಕರು ಹೆಚ್ಚು ಹೆಚ್ಚು ಕೊಳ್ಳುವಂತೆ ಪ್ರಚೋದಿಸುತ್ತದೆ.

ಭಾರತದಲ್ಲಿರುವ ಅನೇಕ ಮಂದಿಗೆ ಇನ್ನೂ ಬಿಎನ್‌ಪಿಎಲ್ ಯೋಜನೆಗಳ ಬಗ್ಗೆ ಅರಿವಿಲ್ಲ. ಈ ಬಗ್ಗೆ ತಿಳಿದವರಿಗೆ ಅದರ ಸಂಪೂರ್ಣ ವಿವರಗಳು ಗೊತ್ತಿಲ್ಲ. ನಿಮಗೆ ಇದರ ಬಗ್ಗೆ ಅರಿವಿಲ್ಲದೇ ಇದ್ದರೆ ಅದನ್ನು ತಿಳಿದುಕೊಳ್ಳಬೇಕಾದ ಅಗತ್ಯವಿದೆ.


ತಕ್ಷಣಕ್ಕೆ ತನ್ನ ಬಳಿ ಯಾವುದೇ ಹಣ ಇಲ್ಲದೇ ಹೋದರೂ ಕೂಡ ಗ್ರಾಹಕರು ಬಿಎನ್‌ಪಿಎಲ್ ಅಡಿಯಲ್ಲಿ ಖರೀದಿ ಮಾಡಬಹುದು. ಗ್ರಾಹಕನು ತಾನು ಆಯ್ಕೆ ಮಾಡಿಕೊಂಡ ವಸ್ತುವನ್ನು ಶಾಪಿಂಗ್ ಬಾಸ್ಕೆಟ್‌ಗೆ ಸೇರಿಸಬಹುದು. ಮುಂದಿನ ಹೆಜ್ಜೆಯಾಗಿ ಪಾವತಿಗೆ ಮುಂದಾದರೆ ಬಿಎನ್‌ಪಿಎಲ್ ಸಾಲವನ್ನು ಯಾವೆಲ್ಲ ಕಂಪನಿಗಳು ಒದಗಿಸುತ್ತವೆ ಎಂಬುದು ತಿಳಿಯುತ್ತದೆ. ಆ ಬಳಿಕ 48ರಿಂದ 72 ಗಂಟೆಗಳ ಅವಧಿಯಲ್ಲಿ ಕಂಪನಿಯು ಗ್ರಾಹಕರ ಪರವಾಗಿ ಸೆಲ್ಲರ್‌ಗೆ ಪಾವತಿ ಮಾಡುತ್ತದೆ. ನಂತರ ಗ್ರಾಹಕರು ಸಾಲವನ್ನು ನಿಗದಿತ ಅವಧಿಯಲ್ಲಿ ಕಂತುಗಳಲ್ಲಿ ಪಾವತಿ ಮಾಡಬಹುದಾಗಿದೆ. ಆರಂಭಿಕ ಕೆಲವು ದಿನಗಳಿಗೆ ಈ ಮರುಪಾವತಿಯು ಬಡ್ಡಿ–ಮುಕ್ತವಾಗಿರುತ್ತದೆ. ಇದು ಈ ಸೇವೆಯ ಅತ್ಯಂತ ಆಕರ್ಷಣೆಯ ಅಂಶವಾಗಿದೆ. ಸರಳವಾಗಿ ಹೇಳಬೇಕೆಂದರೆ ಬಿಎನ್‌ಪಿಎಲ್ ಎನ್ನುವುದು ತ್ವರಿತ ಸಾಲ ಸೌಲಭ್ಯ. ಆದರೆ ಇದಕ್ಕೆ ಸಂಕೀರ್ಣ ನಿಯಮಗಳು ಮತ್ತು ಷರತ್ತುಗಳು ಇರುವುದಿಲ್ಲ ಎನ್ನುವುದು ಪ್ಲಸ್–ಪಾಯಿಂಟ್.ಹಣಕಾಸು ಕಂಪನಿಗಳ ಸಹಾಯದೊಂದಿಗೆ ಇ–ಕಾಮರ್ಸ್ ಪೋರ್ಟಲ್‌ಗಳು ಈ ಸಾಲದ ಆಯ್ಕೆಯನ್ನು ಉತ್ತೇಜಿಸುತ್ತವೆ. ಇದು ಗ್ರಾಹಕ ಹಿತರಕ್ಷಣೆಗೆ ಒತ್ತು ನೀಡುವ ಉತ್ತಮ ಮಾರ್ಗ. ಇದರಿಂದಾಗಿ ಆರ್ಥಿಕ ಪ್ರಗತಿ ಮತ್ತು ಅಭಿವೃದ್ಧಿಗೆ ಇಂಬು ನೀಡಿದಂತಾಗುತ್ತದೆ.

ಹಾಗಾದರೆ ಇಂತಹ ಒಂದು ಸೌಲಭ್ಯ ವರವೋ ಶಾಪವೋ? ಅದನ್ನು ಪತ್ತೆ ಮಾಡೋಣ ಬನ್ನಿ.

**ಬಿಎನ್‌ಪಿಎಲ್– ಒಂದು ವರದಾನ:** ಈಗ ಖರೀದಿಸಿ ಬಳಿಕ ಪಾವತಿಸಿ ಸೌಲಭ್ಯವನ್ನು ಸುಲಭವಾಗಿ ಬಳಸಿಕೊಳ್ಳಬಹುದಾದ ಕಾರಣ ಬಹುತೇಕ ಜನರು ಇದನ್ನು




**ಶಾಪಿಂಗ್ ಕ್ಷೇತ್ರದಲ್ಲಿ ಇದೊಂದು ಕ್ರಾಂತಿ–ಕಾರಿ ಹೆಜ್ಜೆ ಎಂದು ವಾದಿಸಲಾಗುತ್ತದೆ. ಆದರೂ BNPL ಪರಿಕಲ್ಪನೆ ನಿಮ್ಮ ಸಾಲದ ಪ್ರವೃತ್ತಿಯನ್ನು ಅಧಿಕೃತವಾಗಿ ಹೆಚ್ಚಿಸುವುದು ಇದರ ಉದ್ದೇಶ. ನಿಮ್ಮ ಬಳಿ ಕ್ರೆಡಿಟ್ ಕಾರ್ಡ್ ಇದ್ದರೆ ನೀನು ಕ್ರೆಡಿಟ್ ಆಧಾರದಲ್ಲಿ ಖರೀದಿ ಮಾಡುತ್ತೀರಿ ಮತ್ತು ಅದರ ಪಾವತಿಯನ್ನು ಕೆಲ ದಿನಗಳ ಬಳಿಕ ಮಾಡುತ್ತೀರಿ. ಇದೂ ಕೂಡ ಒಂದು ರೀತಿಯಲ್ಲಿ BNPL ಎಂದೇ ಲೆಕ್ಕ. ಹಾಗಾದರೆ ಈ ಹೊಸ ರೀತಿಯ ಕ್ರೆಡಿಟ್ ವ್ಯವಸ್ಥೆ ಅತ್ಯಂತ ಕಡಿಮೆ ಅವಧಿಯಲ್ಲಿ ಇಷ್ಟೊಂದು ಯಶಸ್ವಿಯಾಗಲು ಹೇಗೆ ಸಾಧ್ಯವಾಯಿತು?**



ವರದಾನ ಎಂದೇ ಪರಿಗಣಿಸಿದ್ದಾರೆ. ಈ ಪಾವತಿ ಯೋಜನೆಯು ಯಾಕೆ ಇಷ್ಟೊಂದು ಆಪ್ತವಾಗಿದೆ ಎಂಬುದಕ್ಕೆ ಈ ಕೆಳಗಿನ ಕಾರಣಗಳನ್ನು ನೀಡಬಹುದಾಗಿದೆ. 1. ಖರೀದಿ ಮಾಡಲು ಬೇಕಾದ ಮೊತ್ತ ತಕ್ಷಣವೇ ನಿಮಗೆ ಲಭ್ಯವಾಗಲಿದೆ. ಅತ್ಯುತ್ತಮ ಕ್ರೆಡಿಟ್ ಹಿನ್ನೆಲೆ ಇಲ್ಲದ ಬಳಕೆದಾರರಿಗೆ ಬಿಎನ್‌ಪಿಎಲ್ ಅತ್ಯಂತ ಉಪಯುಕ್ತ. ಹೊಸದಾಗಿ ಕ್ರೆಡಿಟ್ ಸೌಲಭ್ಯ ಪಡೆದುಕೊಳ್ಳುವವರಿಗೂ ಇದು ಉತ್ತಮ. ಯಾಕೆಂದರೆ ಇಲ್ಲಿ ಯಾವುದೇ ಗೊಂದಲ ಅಥವಾ ಸಂಕೀರ್ಣತೆ ಇಲ್ಲ. ಇಷ್ಟು ಮಾತ್ರವಲ್ಲದೆ ಮರುಪಾವತಿಯಲ್ಲಿ ಶಿಸ್ತು ಪ್ರದರ್ಶಿಸಿದರೆ ಭವಿಷ್ಯದಲ್ಲಿ ಉತ್ತಮ ಕ್ರೆಡಿಟ್ ಹಿನ್ನೆಲೆಗೂ ಕಾರಣವಾಗಲಿದೆ.

2. ತಕ್ಕಮಟ್ಟಿಗೆ ಯೋಚಿಸಿ ಖರೀದಿ ಮಾಡಿದರೆ ಮುಂದಿನ ಕೆಲವು ತಿಂಗಳುಗಳಲ್ಲಿಯೇ ಖರೀದಿಸಿದ ಉತ್ಪನ್ನದ ಪಾವತಿ ಮಾಡಿ ಮುಗಿಸಬಹುದು. ಅದಕ್ಕಾಗಿ ಖರೀದಿಯನ್ನೇ ಮುಂದೂಡಬೇಕಾದ ಅಗತ್ಯವಿರುವುದಿಲ್ಲ.

3. ಮರುಪಾವತಿಯನ್ನು ನೇರವಾಗಿ ಬ್ಯಾಂಕ್ ಮೂಲಕವೇ ಮಾಡಬಹುದು. ಅದಕ್ಕಾಗಿ ಒಮ್ಮೆ ಬ್ಯಾಂಕ್ ಖಾತೆಗೆ ಲಿಂಕ್ ಮಾಡಬೇಕಾಗುತ್ತದೆ. ಆ ಬಳಿಕ ಸ್ವಯಂಚಾಲಿತವಾಗಿ ಪ್ರತಿ ತಿಂಗಳೂ ಖಾತೆಯಿಂದ ನಿರ್ದಿಷ್ಟ ಮೊತ್ತ ಕಡಿತಗೊಳ್ಳುತ್ತದೆ. ಕ್ರೆಡಿಟ್ ಕಾರ್ಡ್‌ಗಳಲ್ಲಿ ಅನೇಕ ಗುಪ್ತ ಶುಲ್ಕಗಳು ಇರುವುದರಿಂದ ಬಿಎನ್‌ಪಿಎಲ್ ಯೋಜನೆಯ ವೆಚ್ಚವು ಹೆಚ್ಚು ಪಾರದರ್ಶಕವಾಗಿದೆ.

4. ಕ್ರೆಡಿಟ್ ಕಾರ್ಡ್‌ಗಳಿಗೆ ಹೋಲಿಸಿದರೆ ಬಿಎನ್‌ಪಿಎಲ್ ಶುಲ್ಕಗಳು ಕಡಿಮೆ ಬಡ್ಡಿ ದರವನ್ನು ಹೊಂದಿವೆ. ಇದರ ಜೊತೆಗೆ 10ರಿಂದ 30 ದಿನಗಳ ಒಳಗೆ ಮರುಪಾವತಿ ಮಾಡಿದರೆ ಅದನ್ನು ಬಡ್ಡಿ ರಹಿತ ಅವಧಿಯಾಗಿ ಪರಿಗಣಿಸಲಾಗುತ್ತದೆ ಮತ್ತು ಯಾವುದೇ ದಂಡ ವಿಧಿಸುವುದಿಲ್ಲ.

ಬಿಎನ್‌ಪಿಎಲ್ ಯೋಜನೆಯಲ್ಲಿನ ಪ್ರಯೋಜನಗಳನ್ನು ಸಮರ್ಪಕವಾಗಿ ಬಳಕೆ ಮಾಡಿದರೆ ಭವಿಷ್ಯದಲ್ಲಿ ಇದೊಂದು ಅತ್ಯಂತ ಪ್ರಮುಖ ಹಣಕಾಸು ಸೌಲಭ್ಯವಾಗುವುದರಲ್ಲಿ ಅನುಮಾನವಿಲ್ಲ.

**ಬಿಎನ್‌ಪಿಎಲ್– ಒಂದು ಶಾಪ:** ಒಂದು ನಾಣ್ಯಕ್ಕೆ ಎರಡು ಮುಖಗಳು ಇರುವ ಹಾಗೆ ಬಿಎನ್‌ಪಿಎಲ್ ಯೋಜನೆಗೂ ಅದರದ್ದೇ ಆದ ನ್ಯೂನತೆಗಳಿವೆ. ಅವುಗಳನ್ನು ಹೀಗೆ ಪಟ್ಟಿ ಮಾಡಬಹುದು:

1. ನಿಮ್ಮ ಬಳಿ ಒಂದಕ್ಕಿಂತ ಹೆಚ್ಚು ಬಿಎನ್‌ಪಿಎಲ್ ಕಾರ್ಡ್‌ಗಳಿದ್ದರೆ ಮತ್ತು ಈ ಸೇವೆಯನ್ನು ಎಚ್ಚರಿಕೆಯಿಂದ ಬಳಕೆ ಮಾಡದೇ ಇದ್ದರೆ ತೊಂದರೆಗೆ ಸಿಲುಕಬಹುದು. ಯಾಕೆಂದರೆ ಹೆಚ್ಚು ಸಾಲವನ್ನು ನೀವು ಪಡೆದುಕೊಳ್ಳುತ್ತಲೇ ನಿಮ್ಮ ಹಣಕಾಸು ಸ್ಥಿರತೆ ಕಡಿಮೆಯಾಗುತ್ತದೆ ಎಂಬುದನ್ನು ನೆನಪಿಟ್ಟುಕೊಳ್ಳಬೇಕು. ಜೊತೆಗೆ ನಿಮ್ಮ ಕ್ರೆಡಿಟ್ ಸ್ಕೋರ್ ಕೂಡ ತಗ್ಗಲಿದೆ. ಹಾಗಾಗಿ ಯಾವತ್ತೂ ಎಚ್ಚರಿಕೆಯಿಂದ ವರ್ತಿಸುವುದು ಮತ್ತು ಬಿಎನ್‌ಪಿಎಲ್ ಕ್ರೆಡಿಟ್ ಸೌಲಭ್ಯವನ್ನು ಕಡಿಮೆ ಬಾರಿ ಬಳಸಿದಷ್ಟು ಉತ್ತಮ.

2. ಈ ಪಾವತಿಯು ಸಾಲದ ಇನ್ನೊಂದು ರೂಪ ಎಂಬುದನ್ನು ನೆನಪಿಟ್ಟುಕೊಳ್ಳಬೇಕು. ಇದರಿಂದ ಜನರ ಸಾಲದ ಹೊರೆ ಹೆಚ್ಚುವುದು ನಿಶ್ಚಿತ. ಜೊತೆಗೆ ಮರುಪಾವತಿಯ ಜವಾಬ್ದಾರಿ ಕೂಡ ಹೆಚ್ಚಲಿದೆ. ಇಷ್ಟು ಮಾತ್ರವಲ್ಲದೆ ಮರುಪಾವತಿ ಮಾಡುವಲ್ಲಿ ನಿರಂತರವಾಗಿ ವಿಳಂಬ ಮಾಡುತ್ತ ಹೋದರೆ ಅಥವಾ ಸುಸ್ತಿದಾರರಾದರೆ ಭವಿಷ್ಯದಲ್ಲಿ ಸುದೀರ್ಘಾವಧಿ ಸಾಲವನ್ನು ಪಡೆದುಕೊಳ್ಳುವುದು ಕಷ್ಟವಾಗಲಿದೆ.

ಒಟ್ಟಾರೆಯಾಗಿ, ಹೊಸ ತಲೆಮಾರಿನ ಹುಡುಗರು ತಮ್ಮ ಬಜೆಟ್‌ಗಳಿಗಷ್ಟೇ ಅಂಟಿಕೊಂಡು ಖರೀದಿ ಮಾಡದೇ ಇದ್ದರೆ ಭವಿಷ್ಯದಲ್ಲಿ ಅವರು ಅಪಾಯಕ್ಕೆ ಸಿಲುಕುವ ಸಾಧ್ಯತೆಗಳು ಹೆಚ್ಚಾಗಿವೆ. ಅಂತಿಮವಾಗಿ ಖರ್ಚು ಮಾಡುವಾಗ ಯಾವಾಗಲೂ ಜವಾಬ್ದಾರಿಯಿಂದ ವರ್ತಿಸಬೇಕಾಗುತ್ತದೆ.ಖರೀದಿ ಮಾಡುವ ಆರಂಭಿಕ ಹಂತದಲ್ಲಿ ಎಲ್ಲವೂ ನಿಯಂತ್ರಣದಲ್ಲಿದೆ ಅನ್ನಿಸುತ್ತದೆ. ಆದರೆ ಸುದೀರ್ಘಾವಧಿಯಲ್ಲಿ ಹತೋಟಿ ತಪ್ಪುವುದು ನಿಶ್ಚಿತ.ಸಾಲದ ಹೆಚ್ಚುವರಿ ಹೊರೆಯೊಂದಿಗೆ ನಿಮ್ಮ ಹಣಕಾಸನ್ನು ಎಚ್ಚರಿಕೆಯಿಂದ ನಿಭಾಯಿಸುವುದು ಅತ್ಯಗತ್ಯ.ಇದು ನಿಮ್ಮ ಹಣಕಾಸು ಭವಿಷ್ಯವನ್ನು ನಿರ್ಧರಿಸುತ್ತದೆ.ಬಿಎನ್‌ಪಿಎಲ್ ಯೋಜನೆಯು ಉತ್ತಮ ಸಾಲದ ಆಯ್ಕೆ ಎಂದು ನಾವು ಹೇಳಬಹುದಾದರೂ ಬಳಕೆದಾರರು ಇದನ್ನು ಹೇಗೆ ನಿಭಾಯಿಸಬೇಕು ಎಂದು ಅರ್ಥಮಾಡಿಕೊಳ್ಳಬೇಕಾದುದು ಅತ್ಯಗತ್ಯ.ಬಾಕಿ ಉಳಿದಿರುವ ಮೊತ್ತವನ್ನು ಸಕಾಲದಲ್ಲಿ ಮತ್ತು ವ್ಯವಸ್ಥಿತವಾಗಿ ಮರುಪಾವತಿ ಮಾಡುವುದು ಕೂಡ ಅಷ್ಟೇ ಮುಖ್ಯ.

# ಆರೋಗ್ಯ ವಿಮೆಯಲ್ಲಿ ನೋ ಕ್ಲೈಮ್ ಬೋನಸ್

**ಆರೋಗ್ಯ** ವಿಮಾ ಪಾಲಿಸಿಯಲ್ಲಿ ಯಾವುದೇ ಕ್ಲೈಮ್ ಮಾಡದೇ ದಕ್ಕುವ ಪಾಯಿಂಟ್‌ನ್ನೇ ನಾವು ಬೋನಸ್ ಎಂದು ಕರೆಯುತ್ತೇವೆ. ಆದರೆ ಪಾಲಿಸಿಯಲ್ಲಿ ಯಾವ ರೀತಿಯ ನೋ ಕ್ಲೈಮ್ ಬೋನಸ್(ಎನ್‌ಸಿಬಿ) ಯನ್ನು ಕಲ್ಪಿಸಲಾಗಿದೆ ಎನ್ನುವ ಆಧಾರದಲ್ಲಿ ಸಂಚಿತ ಬೋನಸ್‌ನ ಲೆಕ್ಕಾಚಾರ ಮಾಡಲಾಗುತ್ತದೆ.



ಇದಕ್ಕೆ ಸಂಬಂಧಿಸಿದ ಉದಾಹರಣೆಗಳನ್ನು ಗಮನಿಸೋಣ.ಬೆಂಗಳೂರಿನ ಶರಣೇಂದ್ರ ಅವರ ಬಳಿ ಐದು ಲಕ್ಷ ರೂ.ಮೌಲ್ಯದ ಆರೋಗ್ಯ ವಿಮಾ ಪಾಲಿಸಿ ಇದೆ.ಅವರು ತಮ್ಮ ಪಾಲಿಸಿ ವರ್ಷದ ಅವಧಿಯಲ್ಲಿ ಯಾವುದೇ ಕ್ಲೈಮ್‌ನ್ನು ಮಾಡಿರಲಿಲ್ಲ. ಅವರ ಈ ಆರೋಗ್ಯ ವಿಮೆ ಯೋಜನೆಯನ್ನು ನವೀಕರಣ ಮಾಡುವ ಸಂದರ್ಭದಲ್ಲಿ ವಿಮಾ ಕಂಪೆನಿಯು ಅವರಿಗೆ ಶೇ.20ರಷ್ಟು ಹೆಚ್ಚುವರಿ ಸೌಲಭ್ಯವನ್ನು ಒದಗಿಸುವುದಾಗಿ ತಿಳಿಸಿತು.ಅದರ ಫಲವಾಗಿ ಮುಂದಿನ ಪಾಲಿಸಿ ವರ್ಷಕ್ಕೆ ಅವರ ಒಟ್ಟು ರಿಸ್ಕ್ ಕವರೇಜ್ ಆರು ಲಕ್ಷಕ್ಕೆ ಏರಿಕೆಯಾಯಿತು.

ಒಂದು ವೇಳೆ ಮುಂದಿನ ಪಾಲಿಸಿ ವರ್ಷವೂ ಕೂಡ ಅವರು ಯಾವುದೇ ಕ್ಲೈಮ್ ಮಾಡದೇ ಇದ್ದರೆ ನೋ ಕ್ಲೈಮ್ ಬೋನಸ್ ಎಲ್ಲವೂ ಸಂಗ್ರಹಗೊಂಡು ಅವರ ರಿಸ್ಕ್ ಕವರೇಜ್ ಏಳು ಲಕ್ಷ ರೂಪಾಯಿಗೆ ಏರಿಕೆಯಾಗುತ್ತದೆ.

ಆದರೆ ಸಂಚಿತ ಬೋನಸ್ ಸಾಮಾನ್ಯವಾಗಿ ಶೇ.100 ಅಥವಾ ಶೇ.200 ಅಥವಾ ಶೇ.500ರ ವರೆಗೂ ಮಿತಿಯನ್ನು ಹೊಂದಿರಬಹುದು. ಹೆಚ್ಚುವರಿ ಕವರೇಜ್ ಪ್ರಸ್ತಾಪಿತ ಮಿತಿಯನ್ನು ಮೀರುವಂತಿಲ್ಲ. ಹಾಗಾಗಿ ಸತತ ಐದು ಅಥವಾ ಹತ್ತು ವರ್ಷಗಳ ಕ್ಲೈಮ್ ರಹಿತ ವರ್ಷಗಳ ಬಳಿಕ ಶರಣೇಂದ್ರ ಅವರು ರೂ.ಹತ್ತು ಲಕ್ಷದ

ತನಕವೂ (ಮೂಲ ಒಟ್ಟು ವಿಮಾ ಮೊಬಲಗು ಐದು ಲಕ್ಷ ರೂ. ಮತ್ತು ಶೇ.100 ಎನ್‌ಸಿಬಿ ರೂ.5 ಲಕ್ಷ) ಒಟ್ಟು ರಿಸ್ಕ್ ಕವರೇಜ್‌ನ ಅರ್ಹತೆಯನ್ನು ಪಡೆದಿರುತ್ತಾರೆ.

ಪಾಲಿಸಿಯ ಅಡಿಯಲ್ಲಿ ಯಾವ ರೀತಿಯ ಎನ್‌ಸಿಬಿ (ನೋ ಕ್ಲೈಮ್ ಬೋನಸ್) ಪ್ರಯೋಜನಗಳು ಇವೆ ಎನ್ನುವುದನ್ನು ಪಾಲಿಸಿ ಶೆಡ್ಯೂಲ್‌ನಿಂದ ತಿಳಿದುಕೊಳ್ಳಬಹುದು. ಇಲ್ಲಿಯ ತನಕ ಎಷ್ಟು ಬೋನಸ್ ಮೊತ್ತ ಸಂಗ್ರಹವಾಗಿದೆ ಎಂಬುದು ಕೂಡ ಅದರಲ್ಲಿ ಉಲ್ಲೇಖ ಮಾಡಲಾಗುತ್ತದೆ.ಇದು ಪ್ರತಿ ಆರೋಗ್ಯ ವಿಮಾ ಯೋಜನೆಯಲ್ಲಿ ಹಾಗೂ ಪ್ರತಿ ವಿಮಾದಾರರಲ್ಲಿಯೂ ವ್ಯತ್ಯಾಸವಿರುತ್ತದೆ.

ನೋ ಕ್ಲೈಮ್ ಬೋನಸ್ ರೀತಿಯಲ್ಲಿಯೇ ಗ್ಯಾರೆಂಟಿ ಸಂಚಿತ ಬೋನಸ್ (ಜಿಸಿಬಿ) ಕೂಡ ಕೆಲಸ ಮಾಡುತ್ತದೆ.ಇದರಲ್ಲಿರುವ ಪ್ರಮುಖ ಬದಲಾವಣೆ ಎಂದರೆ ಕ್ಲೈಮ್‌ಗಳ ಹೊರತಾಗಿಯೂ ಸೌಲಭ್ಯಗಳು ಲಭ್ಯವಾಗುತ್ತವೆ. ಅಂದರೆ ನೀವು ಕ್ಲೈಮ್ ಮಾಡುತ್ತೀರೋ ಇಲ್ಲವೋ ಪ್ರತಿ ವರ್ಷ ನಿಮ್ಮ ರಿಸ್ಕ್ ಕವರ್ ಆಗುವ ಮೊತ್ತ ಹೆಚ್ಚುತ್ತಲೇ ಇರುತ್ತದೆ.

ಹಾಗಾದರೆ ಒಂದು ಆರೋಗ್ಯ ವಿಮಾ ಯೋಜನೆಯಲ್ಲಿ ನೋ ಕ್ಲೈಮ್ ಬೋನಸ್‌ನ ಪ್ರಯೋಜನವನ್ನು ಪಡೆದುಕೊಳ್ಳುವುದು ಹೇಗೆ?

ಅನೇಕ ವಿಮಾ ಕಂಪೆನಿಗಳು ಈಗ ಆ್ಯಡ್–ಆನ್ ಕವರ್ ಅಡಿಯಲ್ಲಿ ನೋ ಕ್ಲೈಮ್ ಬೋನಸ್ ಅಥವಾ ನಿಶ್ಚಿತ ಸಂಚಿತ ಬೋನಸ್‌ನ್ನು ಒದಗಿಸುತ್ತವೆ.

ಒಂದು ಆರೋಗ್ಯ ವಿಮಾ ಪಾಲಿಸಿಯನ್ನು




ಖರೀದಿ ಮಾಡುವಾಗ ಅಥವಾ ನವೀಕರಣ ಮಾಡುವ ಸಂದರ್ಭದಲ್ಲಿ ನಿಮ್ಮ ಆರೋಗ್ಯ ವಿಮಾ ಪ್ರೀಮಿಯಂನೊಂದಿಗೆ ಸಲ್ಪ ಹೆಚ್ಚುವರಿ ಮೊತ್ತವನ್ನು ಆ್ಯಡ್–ಆನ್ ರೂಪದಲ್ಲಿ ಪಾವತಿ ಮಾಡುವ ಮೂಲಕ ಈ ಸೌಲಭ್ಯವನ್ನು ಪಡೆದುಕೊಳ್ಳಬಹುದು.ಆದ್ದರಿಂದ ಒಂದು ಹೊಸ ಆರೋಗ್ಯ ವಿಮಾ ಪಾಲಿಸಿಯನ್ನು ಕೊಳ್ಳುವಾಗ ಅಥವಾ ಆ್ಯಡ್–ಆನ್ ಸೌಲಭ್ಯವನ್ನು ಸೇರಿಸುವ ಸಂದರ್ಭದಲ್ಲಿ ಅದರಲ್ಲಿರುವ ಸೌಲಭ್ಯಗಳು, ಪ್ರಯೋಜನಗಳು ಮತ್ತಿತರ ಅಂಶಗಳನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಬೇಕು ಮತ್ತು ಪಾಲಿಸಿ ಬ್ರೋಷರ್‌ಗಳನ್ನು ಹಾಗೂ ಪಾಲಿಸಿ ವಾಕ್ಯಗಳನ್ನು ಕೂಲಂಕಷವಾಗಿ ಓದಬೇಕು. ಜೊತೆಗೆ ನಿಮ್ಮ ಅಗತ್ಯಗಳಿಗೆ ತಕ್ಕಂತೆ ಆ್ಯಡ್–ಆನ್‌ಗಳ ಮೌಲ್ಯಮಾಪನ ಮಾಡಬೇಕು.

ಎನ್‌ಸಿಬಿ ಸೌಲಭ್ಯವು ವೈಯಕ್ತಿಕ ಆರೋಗ್ಯ ಯೋಜನೆ ಮತ್ತು ಕುಟುಂಬ ಯೋಜನೆ ಎರಡರಲ್ಲೂ ಲಭ್ಯ.ಫ್ಯಾಮಿಲಿ ಫ್ಲೋಟರ್ ಯೋಜನೆ ಅಡಿಯಲ್ಲಿ ಪಾಲಿಸಿ ಅವಧಿಯಲ್ಲಿ ಯಾವುದೇ ಕ್ಲೈಮ್‌ನ್ನು ಮಾಡದೇ ಇದ್ದರೆ ಎನ್‌ಸಿಬಿ ಅನ್ವಯವಾಗುತ್ತದೆ.

**ಬಾಟಮ್‌ಲೈನ್:** ಒಟ್ಟಾರೆಯಾಗಿ ಎನ್‌ಸಿಬಿ ಮತ್ತು ಜಿಸಿಬಿ ಅಂಶಗಳನ್ನು ಒಳಗೊಂಡ ಯೋಜನೆಯು ವಿಮಾ ಸೌಲಭ್ಯವನ್ನು ಇನ್ನಷ್ಟು ಹೆಚ್ಚಿಸುತ್ತದೆ. ಜೊತೆಗೆ ಚಿಕಿತ್ಸಾ ವೆಚ್ಚದ ಬಗ್ಗೆ ಯಾವ ಚಿಂತೆಯನ್ನೂ ಮಾಡದೆ ಅತ್ಯುತ್ತಮವಾದ ಆರೋಗ್ಯ ಸೇವಾ ಸೌಲಭ್ಯಗಳನ್ನು ಪಡೆದುಕೊಳ್ಳಬಹುದು. ಈ ಎಲ್ಲ ಕಾರಣಗಳಿಂದಾಗಿ ನಿಮ್ಮ ಆರೋಗ್ಯ ವಿಮೆಯನ್ನು ಖರೀದಿ ಮಾಡುವ ಅಥವಾ ನವೀಕರಿಸುವುದಕ್ಕೂ ಮುನ್ನ ನಿಶ್ಚಿತ ಸಂಚಿತ ಬೋನಸ್ ಅಥವಾ ನೋ ಕ್ಲೈಮ್ ಬೋನಸ್ ಸೌಲಭ್ಯದ ಬಗ್ಗೆ ತಿಳಿದುಕೊಳ್ಳಲು ವಿಮಾ ತಜ್ಞರನ್ನು ಅಥವಾ ವಿಮಾ ಮಾರ್ಗದರ್ಶಕರನ್ನು ಸಂಪರ್ಕಿಸುವುದು ಉತ್ತಮ.

INSPIRE INDIA
WEALTH PVT LTD
ಹೂಡಿಕೆ ವೇಳೆ -ನೆನಪಿರಲಿ ಇನ್‌ಸ್ಪೈರ್ ಇಂಡಿಯಾ ಎಎಂಎಫ್ಐ ನೋಂದಾಯಿತ ಮ್ಯೂಚುಯಲ್ ಫಂಡ್ ವಿತರಕರು




ಈ ವಾರ್ತಾಪತ್ರದ ಸಂಕಲನ ಮಾಡುವ ಸಂದರ್ಭದಲ್ಲಿ ನಾವು ಎಲ್ಲ ರೀತಿಯ ಕಾಳಜಿ ಮತ್ತು ಎಚ್ಚರಿಕೆಯನ್ನು ವಹಿಸಿರುತ್ತೇವೆ. ಇಲ್ಲಿನ ಮಾಹಿತಿಗಳನ್ನು ಹಲವು ನಂಬಿಕೆಗೆ ಅರ್ಹವಾದ ಮೂಲಗಳಿಂದ ಪಡೆದಿರುತ್ತೇವೆ. ಆದರೆ, ಯಾವುದೇ ಮಾಹಿತಿಯ ಖಚಿತತೆ, ಅರ್ಹತೆ ಅಥವಾ ಪರಿಪೂರ್ಣತೆಯ ಬಗ್ಗೆ ಖಾತರಿಯನ್ನು ನೀಡುವುದಿಲ್ಲ. ಹಾಗಾಗಿ ಇಂತಹ ಮಾಹಿತಿ ಬಳಕೆಯಿಂದ ಆಗಬಹುದಾದ ಯಾವುದೇ ದೋಷ ಅಥವಾ ಲೋಪಗಳಿಗೆ ಜವಾಬ್ಧಾರರಾಗಿರುವುದಿಲ್ಲ. ಈ ವಾರ್ತಾಪತ್ರದಲ್ಲಿ ತಿಳಿಸಲಾದ, ಚರ್ಚಿಸಲಾದ ಅಥವಾ ಶಿಫಾರಸ್ಸು ಮಾಡಲಾದ ಯಾವುದೇ ಯೋಜನೆಗಳಿಗೆ ಸಂಬಂಧಿಸಿದಂತೆ ಹೂಡಿಕೆ ಮಾಡುವ ಸಮರ್ಪಕತೆ ಬಗ್ಗೆ ಹೂಡಿಕೆದಾರರು ಸೂಕ್ತವಾದ ಹಣಕಾಸು ಸಲಹೆಗಳನ್ನು ಪಡೆಯಬೇಕು ಮತ್ತು ಭವಿಷ್ಯದ ನಿರೀಕ್ಷೆಗಳ ಬಗ್ಗೆ ನೀಡಿರುವ ಹೇಳಿಕೆಗಳು ಕಾರ್ಯರೂಪಕ್ಕೆ ಬರಬಹುದು ಅಥವಾ ಬಾರದೇ ಇರಬಹುದು ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. ಮ್ಯೂಚುಯಲ್ ಫಂಡ್ ಹೂಡಿಕೆಗಳು ಯಾವತ್ತೂ ಮಾರುಕಟ್ಟೆಗೆ ಸಂಬಂಧಿಸಿದ ಅಪಾಯದ ವ್ಯಾಪ್ತಿಗೆ ಒಳಪಟ್ಟಿರುತ್ತವೆ. ಹಾಗಾಗಿ ಹೂಡಿಕೆ ಮಾಡುವುದಕ್ಕೂ ಮುನ್ನ ನಿಮಗೆ ನೀಡಲಾದ ದಾಖಲೆಗಳನ್ನು ದಯವಿಟ್ಟು ಅತ್ಯಂತ ಎಚ್ಚರಿಕೆಯಿಂದ ಓದಿಕೊಳ್ಳಿ. ಹಿಂದಿನ ನಿರ್ವಹಣೆಯ ಕೇವಲ ಸೂಚಕ ಉದ್ದೇಶವನ್ನು ಹೊಂದಿದ್ದು ಅದು ಯಾವುದೇ ಕಾರಣಕ್ಕೂ ಭವಿಷ್ಯದ ಮಾರ್ಗದರ್ಶಕವಲ್ಲ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು.

ಇನಸ್ಪೈರ್ ಇಂಡಿಯಾ ವೆಲ್ತ್ ಪ್ರೈ.ಲಿ.
#65, ಸುರಾಸ ಎನ್‌ಕ್ಲೇವ್, ಮೊದಲ ಮಹಡಿ
ಪುಟ್ಟಣ್ಣ ರಸ್ತೆ, ಗಾಂಧಿ ಬಜಾರ್,
ಬಸವನಗುಡಿ, ಬೆಂಗಳೂರು -560004
9035414414, 080-42129917
info@inspireindiafs.com

'ಯಾವುದೇ ಕೆಲಸಕ್ಕೆ ಕಠಿಣ ಶ್ರಮ ಬೇಕಾಗುತ್ತದೆ ಎಂಬುದು ನಿಜ. ಆದರೆ ಸರಿಯಾದ ವಿಷಯದಲ್ಲೇ ಆ ಪ್ರಯತ್ನ ಮಾಡಬೇಕು'